ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:. ಯೋಜನೆ ಇತರೆ/2014-15

ದಿನಾಂಕ:02-07-2014

**-: ಸುತ್ತೋಲೆ :-**

**ವಿಷಯ**:ಸರ್ಕಾರಿ ಶಾಲೆಗಳನ್ನು ಶಿಕ್ಷಣ ಸಾಮರಸ್ಯ ವಿದ್ಯಾಕೇಂದ್ರಗಳನ್ನಾಗಿ ಮಾಡುವ ಬಗ್ಗೆ.

**ಉಲ್ಲೇಖ**:ಸರ್ಕಾರಿ ಆದೇಶ ಸಂಖ್ಯೆ:ಇಡಿ 135 ಮಾಹಿತಿ 2013, ಬೆಂಗಳುರು ದಿನಾಂಕ: 31-08-2013

*******

ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಸುಧಾರಿಸಲು, ಸರ್ಕಾರಿ ಶಾಲೆಗಳನ್ನು **"ಶಿಕ್ಷಣ ಸಾಮರಸ್ಯ ವಿದ್ಯಾಕೇಂದ್ರಗಳನ್ನಾಗಿ"** ಸುಧಾರಿಸಲು ಮರು ರಚನೆಗೊಳಿಸಲು ಖಾಸಗಿ ಸಹಭಾಗಿತ್ವದ ಸಹಾಯದಿಂದ ಪ್ರಸ್ತುತ ಇರುವ ಶಾಲಾ ವ್ಯವಸ್ಥೆಯನ್ನು ಉನ್ನತೀಕರಿಸುವ ನಿಟ್ಟಿನಲ್ಲಿ ಸರ್ಕಾರವು ಉಲ್ಲೇಖದ ಆದೇಶಾನುಸಾರ ಅನುಮತಿಸಿದೆ. ಈ ನಿಟ್ಟಿನಲ್ಲಿ 2013-14 ಸಾಲಿನಿಂದ ಅಗತ್ಯವಿರುವ ಸೌಕರ್ಯಗಳನ್ನು ದಾನಿಗಳು, ಕಾರ್ಪೋರೇಟ್ ಸಂಸ್ಥೆಗಳು ಹಾಗೂ ಸ್ಥಳೀಯ ಸಂಸ್ಥೆಗಳು ಹಾಗೂ ಸ್ಥಳೀಯರ ಸಹಕಾರದೊಂದಿಗೆ ಶಾಲಾ ವ್ಯವಸ್ಥೆಯನ್ನು ಉತ್ತಮಗೊಳಿಸುವುದು, ಸರ್ಕಾರದ ಆಶಯವಾಗಿರುತ್ತದೆ.

ಈ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲೆಗಳನ್ನು ಶಿಕ್ಷಣ ಸಾಮರಸ್ಯ ವಿದ್ಯಾಕೇಂದ್ರಗಳನ್ನಾಗಿ ಪುನರ್ ರಚನೆಗೊಳಿಸುವುದು, ಶಿಕ್ಷಕರ ವಸತಿಗೃಹ ನಿರ್ಮಾಣ, ಮಿನಿ ಕ್ರೀಡಾಂಗಣ ನಿರ್ಮಾಣ, ಶಾಲಾ ಕೈತೋಟ ನಿರ್ಮಾಣ, ಶಾಲಾ ಕಂಪ್ಯೂಟರ್ ಕೇಂದ್ರ ಸ್ಥಾಪನೆ, ಚಿಣ್ಣರ ಚಿಲಿ-ಪಿಲಿ ಕೇಂದ್ರದ ಸ್ಥಾಪನೆ, ಶಾಲಾ ಮೇಲ್ವಿಚಾರಣೆ ಸಮಿತಿ ಸ್ಥಾಪನೆ ಇತ್ಯಾದಿ ಚಟುವಟಿಕೆಗಳಿರುತ್ತವೆ. ಆಸಕ್ತದಾನಿಗಳು, ಸಂಘ ಸಂಸ್ಥೆಗಳು ಹಾಗೂ ಕಾರ್ಪೋರೇಟ್ ವಲಯಗಳನ್ನು ಸಹ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿ ಶಾಲೆಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು ಹಾಗೂ ದಾನವಾಗಿ ಬಂದಿರುವ ವಸ್ತುಗಳನ್ನು/ಸೌಕರ್ಯಗಳನ್ನು ದಾಸ್ತಾನು ಪುಸ್ತಕಕ್ಕೆ ತೆಗೆದುಕೊಂಡು ದೃಢೀಕರಿಸುವುದು ಮುಖ್ಯವಾಗಿರುತ್ತದೆ. ಪ್ರತಿ ಶಾಲಾ ಹಂತದಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯನ್ನು ರಚಿಸಬೇಕಾಗಿದ್ದು. ಈ ಸಮಿತಿಯು ಅಧ್ಯಕ್ಷರು, ಒಬ್ಬ ಸ್ಥಳೀಯ ಸರ್ಕಾರಿ ಸಿಬ್ಬಂದಿ ಹಾಗೂ ಶಾಲಾ ಮುಖ್ಯೋಪಾಧ್ಯಾರನ್ನೊಳಗೊಂಡಿರಬೇಕು. ಎಲ್ಲಾ ಉಪನಿರ್ದೇಶಕರು (ಆಡಳಿತ)ರವರು ಈ ಕಾರ್ಯಕ್ರಮದ ಬಗ್ಗೆ ಶಾಲೆಯ 'ಮುಖ್ಯಶಿಕ್ಷಕರುಗಳಿಗೆ ಮಾರ್ಗದರ್ಶನ ನೀಡಲು ಸೂಚಿಸಿದೆ.

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ :-**

1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ರವರಿಗೆ
2. ಅಪರ ಆಯುಕ್ತರು ಧಾರವಾಡ/ಗುಲ್ಬರ್ಗ/ಬೆಳಗಾಂ ರವರಿಗೆ.
3. ಎಲ್ಲಾ ನಿರ್ದೇಶಕರು ರವರುಗಳಿಗೆ.
4. ಎಲ್ಲಾ ಸಹ ನಿರ್ದೇಶಕರು ರವರುಗಳಿಗೆ.
5. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ.
6. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ.
8. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿ ರವರಿಗೆ

**ಪ್ರತಿಯನ್ನು ಮಾಹಿತಿಗಾಗಿ ಮತ್ತು ವಂದನಾಪೂರ್ವಕವಾಗಿ ಸಲ್ಲಿಸಿದೆ.**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಬೆಂಗಳೂರು ರವರಿಗೆ